

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **31-08-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮೈರ್ ಬಿನ್ ಅಬೂ ವಖಾಸ್ ಒಬ್ಬ ಬದರೀ ಸಹಾಬಿ ಆಗಿದ್ದರು. ಹಿಜರಿ ವರ್ಷ 2ರಲ್ಲಿ ಬದರ್ ಯುದ್ಧದಲ್ಲಿ ಅವರು ಶಹೀದರಾದರು. ಹಝ್ರತ್ ಉಮೈರ್(ರ) ಹಝ್ರತ್ ಸಅದ್ ಬಿನ್ ಅಬೀ ವಖಾಸರ ಕಿರಿಯ ಸಹೋದರನಾಗಿದ್ದರು. ಅವರು ಆರಂಭ ಕಾಲದಲ್ಲಿ ಮುಸ್ಲಿಮರಾಗಿದ್ದರು. ಅವರ ತಾಯಿ ಹಮ್ನ ಬಿನ್ತ್ ಸುಫ್‌ಯಾನ್ ಖುರೈಶಿ ಗೋತ್ರ ಬನೂ ಝುಹ್ರಕ್ಕೆ ಸೇರಿದವರಾಗಿದ್ದರು. ಬದರ್ ಯುದ್ಧದಲ್ಲಿ ಹಝ್ರತ್ ಉಮೈರ್ ಭಾಗವಹಿಸಿ ಅದರಲ್ಲಿಯೇ ಶಹೀದರಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಮೈರ್ ಮತ್ತು ಅಮರ್ ಬಿನ್ ಮುಆಝ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಬದರ್ ಯುದ್ಧದ ಬಗ್ಗೆ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಹೊರಟು ಸ್ವಲ್ಪ ದೂರ ಹೋಗಿ ಅಲ್ಲಿ ಸೈನ್ಯ ತಂಗಬೇಕೆಂದು ಆಜ್ಞಾಪಿಸಿದರು. ಅಲ್ಲಿ ಸೈನ್ಯವನ್ನು ಪರಿಶೋಧಿಸಿದರು. ಚಿಕ್ಕ ಪ್ರಾಯದ ಹುಡುಗರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸವಾರಿ ಮಾಡುವ ಆಶೆಯಿಂದ ಸೈನ್ಯದ ಜೊತೆ ಹೊರಟಿದ್ದರು. ಅವರನ್ನು ಮರಳಿ ಕಳುಹಿಸಲಾಯಿತು. ಸಅದ್ ಬಿನ್ ಅಬೀ ವಖಾಸ್‌ರ ಕಿರಿಯ ಸಹೋದರ ಉಮೈರ್ ಸಹ ಚಿಕ್ಕ ಪ್ರಾಯದವರಾಗಿದ್ದರು. ಹುಡುಗರನ್ನು ಹಿಂದಕ್ಕೆ ಕಳುಹಿಸುವ ಬಗ್ಗೆ ತಿಳಿದಾಗ ಅವರು ಸೈನ್ಯದ ಮಧ್ಯೆ ಅಲ್ಲಲ್ಲಿ ಅಡಗಿ ಕುಳಿತರು. ಕೊನೆಗೆ ಅವರೊಂದಿಗೆ ಸಹ ಹಿಂದಿರುಗಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದರು. ಈ ಆಜ್ಞೆ ಆಲಿಸಿ ಉಮೈರ್ ಅಳಲು ಪ್ರಾರಂಭಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಅಸಾಧಾರಣ ಉತ್ಸಾಹವನ್ನು ನೋಡಿ ಬದರ್ ಯುದ್ಧದಲ್ಲಿ ಭಾಗವಹಿಸಲು ಅನುಮತಿ ನೀಡಿದರು. ಅವರ ಕೈಯ್ಯಲ್ಲಿದ್ದ ಖಡ್ಗ ದೊಡ್ಡದಾಗಿತ್ತು. ಒಂದು ವರದಿ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಖಡ್ಗಕ್ಕೆ ತನ್ನ ಕೈಯಿಂದ ಬರೆ ತೊಡಿಸಿದರು. ಹಝ್ರತ್ ಉಮೈರ್ ಶಹೀದರಾಗುವಾಗ ಅವರ ಪ್ರಾಯ 16 ಆಗಿತ್ತು.

ಇನ್ನೊಬ್ಬ ಸಹಾಬಿ ಹಝ್ರತ್ ಖುತ್‌ಬ ಬಿನ್ ಆಮಿರ್. ಅವರು ಅನ್‌ಸಾರಿ ಆಗಿದ್ದರು. ಅವರ ಪಿತ ಆಮಿರ್ ಬಿನ್ ಹದೀದ. ಹಝ್ರತ್ ಖುತ್‌ಬ, ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಅವರ ತಾಯಿ ಝೈನಬ್ ಬಿನ್ತ್ ಅಮರ್. ಅವರ ಪತ್ನಿಯ ಹೆಸರು ಹಝ್ರತ್ ಉಮ್ಮು ಅಮರ್ ಎಂದಾಗಿತ್ತು. ಅವರ ಪುತ್ರಿ ಹಝ್ರತ್ ಉಮ್ಮು ಅಮೀರ್. ಅವರು ಬೈಅತ್ ಊಲಾ ಮತ್ತು ಸಾನಿಯ ಎರಡರಲ್ಲೂ ಭಾಗವಹಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮಕ್ಕದಲ್ಲಿ ಸಂಧಿಸಿ ನಂಬಿದ ಪ್ರಥಮ ಆರು ಅನ್‌ಸಾರ್‌ಗಳಲ್ಲಿ ಅವರೊಬ್ಬರಾಗಿದ್ದರು. ಈ ಆರು ಜನರು ಬೈಅತ್ ಮಾಡುವ ಮೊದಲು ಬೇರೆ ಯಾವ ಅನ್‌ಸಾರ್ ಸಹ ಬೈಅತ್ ಮಾಡಿರಲಿಲ್ಲ.

ಹಝ್ರತ್ ಖುತ್‌ಬ ನಿಷ್ಣಾತ ಬಿಲ್ಲುಗಾರರಲ್ಲಿ ಒಬ್ಬರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶೌರ್ಯದಿಂದ ಹೋರಾಡಿದ್ದರು. ಅವರಿಗೆ ಒಂಭತ್ತು ಗಾಯಗಳಾಗಿದ್ದುವು. ಮಕ್ಕವನ್ನು ಜಯಿಸಿದಾಗ ಬನೂ ಸಲ್‌ಮ ಗೋತ್ರದ ಪತಾಕೆ ಅವರ ಕೈಯಲ್ಲಿ ಇತ್ತು. ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಖುತ್‌ಬರ ಸ್ಥಿರಚಿತ್ತತೆ ಹೇಗಿತ್ತೆಂದರೆ ಅವರು ಸೈನ್ಯದ ಎರಡು ಸಾಲುಗಳ ಮಧ್ಯೆ ಒಂದು ಕಲ್ಲನ್ನು ಇರಿಸಿ ಹೇಳಿದರು: ಈ ಕಲ್ಲು ಓಡಿ ಹೋಗುವ ತನಕ ನಾನು ಓಡಿ ಹೋಗಲಾರೆ. ಎಂದರೆ ನನ್ನ ಪ್ರಾಣ ಹೋಗುವ ತನಕ ರಣರಂಗದಲ್ಲಿಯೇ ಹೋರಾಡುವೆನು. ಅವರ ಸಹೋದರ ಯಝೀದ್ ಬಿನ್ ಆಮಿರ್ ಎಪ್ಪತ್ತು ಅನ್‌ಸಾರ್‌ಗಳ ಜೊತೆ ಬೈಅತ್ ಅಖಬದಲ್ಲಿ ಸೇರಿದ್ದರು. ಅಬೂ ಹಾತಿಮ್ ವರದಿ ಮಾಡುತ್ತಾರೆ: ಹಝ್ರತ್ ಖುತ್‌ಬ ಬಿನ್ ಆಮಿರ್ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಆದರೆ ಇಬ್ನು ಹಬ್ಬಾನ್ ವರದಿ ಮಾಡುತ್ತಾರೆ: ಹಝ್ರತ್ ಖುತ್‌ಬರವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು.

ಮೂರನೆಯ ಸಹಾಬಿ ಹಝ್ರತ್ ಶುಜಾಅ್ ಬಿನ್ ವಹಬ್. ಅವರು ವಹಬ್ ಬಿನ್ ರಬೀಅರ ಪುತ್ರರಾಗಿದ್ದರು. ಅವರು ಯಮಾಮ ಯುದ್ಧದಲ್ಲಿ ನಿಧನ ಹೊಂದಿದರು. ಅವರನ್ನು ಶುಜಾಅ್ ಬಿನ್ ಅಬೀ ವಹಬ್ ಎಂದು ಸಹ ಕರೆಯುತ್ತಿದ್ದರು. ಅವರ ಕುಟುಂಬ ಬನೂ ಅಬ್ದು ಶಮ್ಸ್‌ರೊಂದಿಗೆ ಪ್ರತಿಜ್ಞಾ ಬದ್ಧವಾಗಿತ್ತು. ಅವರು ಎತ್ತರವಾದ ಆದರೆ ತೆಳು ದೇಹ ಪ್ರಕೃತಿ ಹೊಂದಿದ್ದರು. ಅವರ ತಲೆಗೂದಲು ಅತ್ಯಂತ ನಿಬಿಡವಾಗಿತ್ತು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕರೆಗೆ ಓಗೊಟ್ಟ ಪ್ರಾರಂಭ ಕಾಲದ ಸಹಾಬರಲ್ಲಿ ಒಬ್ಬರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಬುವ್ವತ್ ವಾದ ಪ್ರಕಟಿಸಿ ಆರು ವರ್ಷ ಕಳೆದಾಗ ಅವರ ಸಲಹೆ ಮೇರೆಗೆ ಅಬಿಸೀನಿಯಾ ದೇಶಕ್ಕೆ ವಲಸೆ ಹೋದ ಎರಡನೆಯ ತಂಡದಲ್ಲಿ ಹಝ್ರತ್ ಶುಜಾಅ್ ಸಹ ಸೇರಿದ್ದರು. ಸ್ವಲ್ಪ ಸಮಯದ ನಂತರ ಒಂದು ವದಂತಿ ಹಬ್ಬಿತ್ತು. ಮಕ್ಕದವರು ಮುಸ್ಲಿಮರಾದರು ಎಂದು. ಆಗ

ಶುಜಾಅ್ ಮಕ್ಕಕ್ಕೆ ಮರಳಿ ಬಂದರು. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರಿಗೆ ಮದೀನಕ್ಕೆ ವಲಸೆ ಹೋಗಲು ಅನುಮತಿ ನೀಡಿದಾಗ ಅವರು ತನ್ನ ಸಹೋದರ ಅಖಬ ಬಿನ್ ವಹಬ್ ಜೊತೆ ಸೇರಿ ಮಕ್ಕದಿಂದ ಮದೀನಕ್ಕೆ ವಲಸೆ ಹೋದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಯಮಾಮ ಯುದ್ಧದಲ್ಲಿ ಶಹೀದರಾದಾಗ ಅವರ ಪ್ರಾಯ 40ಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಶುಜಾಅ್‌ರ ಕೈಯಲ್ಲಿ ಒಂದು ತಬ್ಲೀಗಿ ಪತ್ರವನ್ನು ಕೊಟ್ಟು ಡಮಾಸ್ಕಸ್ ಹತ್ತಿರದ ಗೌಥ ಎಂಬ ಸ್ಥಳದ ಮುಖ್ಯಸ್ಥ ಹಾರಿಸ್ ಬಿನ್ ಅಬೀಶಮರ್‌ಗೆ ಕಳುಹಿಸಿದ್ದರು. ಹಿಜರಿ ವರ್ಷ 8 ರಬೀಉಲ್ ಅವ್ವಲ್ ತಿಂಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಒಂದು ಸಮಾಚಾರ ಲಭಿಸಿತು. ಬನೂ ಹವಾಝಿನ್ ಗೋತ್ರದ ಒಂದು ಶಾಖೆ ಬನೂ ಆಮಿರ್ ಮುಸ್ಲಿಮರ ವಿರುದ್ಧ ಯುದ್ಧಕ್ಕೆ ಸಿದ್ಧತೆಗಳನ್ನು ಮಾಡುತ್ತಾರೆ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಶುಜಾಅ್‌ರಿಗೆ 24 ಹೋರಾಟಗಾರರನ್ನು ನೀಡಿ ಶತ್ರುಗಳನ್ನು ಸೋಲಿಸಲು ನಿಯೋಜಿಸಿದರು. ಆ ಸಮಯದಲ್ಲಿ ಬನೂ ಆಮಿರ್ ಗೋತ್ರದ ಜನರು ಮದೀನದಿಂದ ಐದು ರಾತ್ರಿಗಳ ಸಂಚಾರದ ದೂರದಲ್ಲಿ ಮಕ್ಕ ಮತ್ತು ಬಸ್ರದ ಮಧ್ಯೆ ಒಂದು ಸ್ಥಳದಲ್ಲಿ ಡೇರೆ ಹಾಕಿದ್ದರು. ಹಝ್ರತ್ ಶುಜಾಅ್ ತನ್ನ ಸಂಗಡಿಗರ ಜೊತೆಗೆ ರಾತ್ರಿ ಸಂಚಾರ ಮಾಡುತ್ತಾ ಹಗಲು ಹೊತ್ತು ಅವಿತುಕೊಂಡು ಶತ್ರುಗಳ ಕಡೆಗೆ ಹೊರಟಿದ್ದರು. ಒಂದು ದಿನ ಬೆಳಗ್ಗೆ ಅಚಾನಕವಾಗಿ ಅವರ ತಂಡ ಬನೂ ಆಮಿರ್ ಗೋತ್ರದ ಶಿಬಿರವನ್ನು ತಲಪಿತು. ಆಗ ಶತ್ರುಗಳು ಮುಸ್ಲಿಮರು ಅಚಾನಕವಾಗಿ ಅಲ್ಲಿಗೆ ತಲಪಿದುದನ್ನು ಕಂಡು ತಬ್ಬಿಬ್ಬಾದರು. ಶತ್ರುಗಳು ಆಕ್ರಮಣಕ್ಕೆ ಎಲ್ಲಾ ಸಿದ್ಧತೆಗಳೊಂದಿಗೆ ಹೊರಟಿದ್ದರೂ ಅವರು ಸುಸಜ್ಜಿತರಾಗಿದ್ದರೂ ಮುಸ್ಲಿಮರನ್ನು ಕಂಡಕೂಡಲೆ ಎಲ್ಲವನ್ನು ಬಿಟ್ಟು ಓಡಿಹೋದರು. ಶುಜಾಅ್ ತನ್ನ ಸಂಗಡಿಗರೊಂದಿಗೆ ಆ ಶತ್ರುಗಳನ್ನು ಬೆನ್ನಟ್ಟಬೇಡಿರಿ ಎಂದು ಹೇಳಿದರು. ಶತ್ರುಗಳು ಬಿಟ್ಟು ಹೋದ ಒಂಟೆ ಮತ್ತು ಕುರಿಗಳನ್ನು ಅಟ್ಟಿಕೊಂಡು ಮದೀನಕ್ಕೆ ತರಲು ಹೇಳಿದರು. ಶತ್ರುಗಳು ಬಿಟ್ಟು ಹೋದ ಸ್ವತ್ತು ಎಷ್ಟಿತ್ತೆಂದರೆ, ಪ್ರತಿಯೊಬ್ಬ ಹೋರಾಟಗಾರನಿಗೆ ಹದಿನೈದು ಹದಿನೈದು ಒಂಟೆಗಳು ಮತ್ತು ಬೇರೆ ಸಾಮಗ್ರಿಗಳು ಲಭಿಸಿದುವು. ಎಂದರೆ ಶತ್ರುಗಳು ಪೂರ್ಣ ಯುದ್ಧ ಸಿದ್ಧತೆಯಿಂದ ಸರಕು ಸಾಮಗ್ರಿಗಳೊಂದಿಗೆ ಅಲ್ಲಿ ತಂಗಿದ್ದರು ಎಂದು ತಿಳಿದುಕೊಳ್ಳಬಹುದಾಗಿದೆ.

ಇನ್ನೊಬ್ಬ ಸಹಾಬಿ ಹಝ್ರತ್ ಶಮಾಸ್ ಬಿನ್ ಉಸ್ಮಾನ್. ಅವರ ಪಿತ ಉಸ್ಮಾನ್ ಬಿನ್ ಶರೀದ್. ಹಿಜರಿ 3ರಲ್ಲಿ ಉಹುದ್ ಯುದ್ಧದಲ್ಲಿ ಹಝ್ರತ್ ಶಮಾಸ್ ಶಹೀದರಾದರು. ಹಝ್ರತ್ ಶಮಾಸ್ ಬಿನ್ ಉಸ್ಮಾನ್ ಮತ್ತು ಅವರ ತಾಯಿ ಹಝ್ರತ್ ಸಫಿಯ ಬಿನ್ತ್ ರಬೀಅ ಬಿನ್ ಅಬ್ದು ಶಮ್ಸ್ ಅಬಿಸೀನಿಯಾದ ಕಡೆಗೆ ಎರಡನೆಯ ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಅವರ ತಾಯಿ ಬದರ್ ಯುದ್ಧದಲ್ಲಿ ಹತರಾದ ಮಕ್ಕದ ಮುಖಂಡರಾದ ಉತ್‌ಬ ಮತ್ತು ಶಅಬರ ಸಹೋದರಿಯಾಗಿದ್ದರು. ಶಮಾಸ್‌ರವರು ಮಕ್ಕಕ್ಕೆ ಮರಳಿ ಬಂದು ಮದೀನಕ್ಕೆ ಹಿಜ್‌ರತ್ ಮಾಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಶಮಾಸ್ ಮತ್ತು ಹಝ್ರತ್ ಹನ್‌ಝುಲ ಬಿನ್ ಅಬೀ ಆಮಿರ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು.

ಹಝ್ರತ್ ಶಮಾಸ್ ಬಿನ್ ಉಸ್ಮಾನ್ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಬಹಳ ಶೌರ್ಯದಿಂದ ಹೋರಾಡಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಶಮಾಸ್ ಬಿನ್ ಉಸ್ಮಾನರನ್ನು ಗುರಾಣಿಯ ಹಾಗೆ ಕಂಡೆನು. ಹಝ್ರತ್ ಶಮಾಸ್ ತನ್ನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಗುರಾಣಿಯ ಹಾಗೆ ಇರಿಸಿದ್ದರು. ಅವರು ಆ ಸ್ಥಿತಿಯಲ್ಲಿ ತೀವ್ರವಾಗಿ ಗಾಯಗೊಂಡಾಗ ಅವರನ್ನು ಮದೀನದಲ್ಲಿ ಹಝ್ರತ್ ಆಯಿಶಾರ ಮನೆಗೆ ಕೊಂಡುಹೋಗಲಾಯಿತು. ಆಗ ಹಝ್ರತ್ ಉಮ್ಮು ಸಲ್ಮ ಹೇಳಿದರು: ನನ್ನ ಚಿಕ್ಕಪ್ಪನವರ ಪುತ್ರನಾದ ನನ್ನ ಸಹೋದರನನ್ನು ನನ್ನ ಮನೆಯ ಹೊರತು ಬೇರೆಲ್ಲಿಗೂ ಕರೆದುಕೊಂಡು ಹೋಗಬಾರದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಮಾಸ್‌ರನ್ನು ಉಮ್ಮು ಸಲ್ಮರ ಮನೆಗೆ ಕೊಂಡೊಯ್ಯಲು ಹೇಳಿದರು. ಹಾಗೆ ಅವರನ್ನು ಅಲ್ಲಿಗೆ ತಲಪಿಸಲಾಯಿತು. ಅವರು ಅಲ್ಲಿಯೇ ನಿಧನ ಹೊಂದಿದರು. ಅವರು ನಿಧನ ಹೊಂದುವಾಗ ಅವರ ಪ್ರಾಯ 34 ಆಗಿತ್ತು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಅಬಸ್ ಬಿನ್ ಜಬರ್. ಅವರ ಪಿತ ಜಬರ್ ಬಿನ್ ಆಮಿರ್. ಅವರು ಹಿಜರಿ 34ರಲ್ಲಿ ಎಪ್ಪತ್ತನೆ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ಅವರು ಅನ್‌ಸಾರ್ ಗೋತ್ರ ಬನೂ ಹಾರಿಸಕ್ಕೆ ಸೇರಿದವರಾಗಿದ್ದರು. ಅವರ ಹಿಂದಿನ ಹೆಸರು ಅಬ್ದುಲ್ ಉಝ್ಝಾ ಎಂದಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ಬದಲಾಯಿಸಿ ಅಬ್ದುರ್ರಹ್ಮಾನ್ ಎಂದು ಮಾಡಿದರು. ಅವರು ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಕಅಬ್ ಬಿನ್ ಅಶ್‌ರಫ್ ಎಂಬ ಯಹೂದಿ ಶತ್ರುವನ್ನು ಹತ್ಯೆ ಮಾಡಿದವರಲ್ಲಿ ಅವರು ಸಹ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಅಬಸ್ ಮತ್ತು ಹಝ್ರತ್ ಅನೀಸ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರು ನಿಧನರಾದಾಗ ಹಝ್ರತ್ ಉಸ್ಮಾನ್(ರ) ಅವರ ಜನಾಝು ನಮಾಝ್ ನಿರ್ವಹಿಸಿದ್ದರು. ಜನ್ನತುಲ್ ಬಖೀಅ್‌ನಲ್ಲಿ ಅವರು ದಫನುಗೊಳಿಸಲ್ಪಟ್ಟರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಹಝ್ರತ್ ಅಬೂ ಅಬಸ್ ದೃಷ್ಟಿ ಹೀನರಾದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಒಂದು ಬೆತ್ತ ನೀಡಿ ಇದರ ಮೂಲಕ ಪ್ರಕಾಶ ಪಡೆಯಿರಿ ಎಂದು ಹೇಳಿದರು. ಆ ಬೆತ್ತ ಅವರು ನಡೆಯುವಾಗ ಮುಂದೆ ಬೆಳಕು ನೀಡುತ್ತಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂವರು ಸಹಾಬರ ಬಗ್ಗೆ ಒಂದು ವರದಿ ಹೀಗಿದೆ: ಒಮ್ಮೆ ಅವರು ಅಂಧಕಾರಮಯ ರಾತ್ರಿಯಲ್ಲಿ ಸಂಚರಿಸುತ್ತಿದ್ದಾಗ ಒಂದು ಬೆಳಕು ಅವರ ಮುಂದೆ ಪ್ರಕಾಶ ಬೀರುವ ದೃಶ್ಯವನ್ನು ಅಲ್ಲಾಹನು ತೋರಿಸಿದ್ದನು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಬೂ ಅಬಸ್ ರೋಗಿಯಾಗಿ ಮಲಗಿದ್ದಾಗ ಅವರನ್ನು ಸಂದರ್ಶಿಸಲು ಹೋದಾಗ ಅವರು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿದ್ದರು. ಅವರು ಎಚ್ಚರಗೊಂಡಾಗ ಅವರೊಂದಿಗೆ ಹಝ್ರತ್ ಉಸ್ಮಾನ್(ರ) ಕೇಳಿದರು, ನೀವು ನಿಮ್ಮನ್ನು ಯಾವ ಸ್ಥಿತಿಯಲ್ಲಿರುವುದಾಗಿ ಕಾಣುತ್ತಿರುವಿರಿ. ಅವರು ಹೇಳಿದರು: ನಾವು ನಮ್ಮ ಸ್ಥಿತಿ ಉತ್ತಮವಾಗಿಯೇ ಕಾಣುತ್ತೇವೆ. ಆದರೆ ಒಂಟೆಯನ್ನು ಕಟ್ಟುವ ಒಂದು ಹಗ್ಗ ನಮ್ಮ ಕಾರಣದಿಂದ ಮತ್ತು ಕೆಲಸಗಾರರ ತಪ್ಪಿನಿಂದ ಕಳೆದು ಹೋಗಿತ್ತು. ನಾವು ಅದರ ಬಗ್ಗೆ ಇನ್ನೂ ಚಿಂತೆಯಿಂದ ಮುಕ್ತರಾಗಿಲ್ಲ.

ಹಝ್ರತ್ ಅನಸ್ ವರದಿ ಮಾಡುತ್ತಾರೆ; ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಸರ್ ನಮಾಝನ್ನು ಬೇಗನೆ ಪ್ರಾರಂಭಿಸುತ್ತಿದ್ದರು. ಅನ್‌ಸಾರ್‌ಗಳ ಪೈಕಿ ಇಬ್ಬರ ಮನೆಗಳು ಮಸ್‌ಜಿದ್ ನಬವಿಯಿಂದ ಹೆಚ್ಚು ದೂರವಿತ್ತು. ಅವರಲ್ಲಿ ಒಬ್ಬರು ಹಝ್ರತ್ ಅಬೂ ಲಬಾಬ ಬಿನ್ ಅಬ್ದುಲ್ ಮುನ್‌ಝಿರ್. ಇನ್ನೊಬ್ಬರು ಅಬೂ ಅಬಸ್ ಬಿನ್ ಜಬರ್. ಒಬ್ಬರ ಮನೆ ಖುಬಾದಲ್ಲಿಯೂ ಇನ್ನೊಬ್ಬರದ್ದು ಬನೂ ಹಾರಿಸದಲ್ಲಿಯೂ ಇತ್ತು. ಈ ಇಬ್ಬರು ಅಸರ್ ನಮಾಝನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೇತೃತ್ವದಲ್ಲಿ ನಿರ್ವಹಿಸಿ ತಮ್ಮ ಜನರ ಬಳಿಗೆ ಹೋಗುತ್ತಿದ್ದರು. ಆಗಲೂ ಅಲ್ಲಿ ಜನರು ಅಸರ್ ನಮಾಝ್ ಮಾಡಿರುತ್ತಿರಲಿಲ್ಲ. ಹಝ್ರತ್ ಅಬೂ ಅಬಸ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಚಲಿಸಿ ತನ್ನ ಪಾದಗಳನ್ನು ಧೂಳಿನಿಂದ ಮಲಿನಗೊಳಿಸಿದವನಿಗೆ ಅಲ್ಲಾಹನು ನರಕಾಗ್ನಿಯನ್ನು ನಿಷಿದ್ಧಗೊಳಿಸಿರುವನು.

ಇನ್ನೊಬ್ಬ ಸಹಾಬಿ ಹಝ್ರತ್ ಅಖೀಲ್ ಬಿನ್ ಅಬ್ದುಲ್ಲಾ ಅನ್‌ಸಾರಿ. ಅವರ ಪಿತ ಅಬ್ದುಲ್ಲಾ ಬಿನ್ ಸಅಲಬ. ಅವರು ಹಿಜರಿ 12ರಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಅವರ ಮೊದಲಿನ ಹೆಸರು ಅಬ್ದುಲ್ ಉಝ್ಝಾ ಎಂದಾಗಿತ್ತು. ಮುಸ್ಲಿಮರಾದ ನಂತರ ಆ ಹೆಸರನ್ನು ಅಬ್ದುರ್ರಹ್ಮಾನ್ ಎಂದಿರಿಸಲಾಯಿತು. ಅವರು ಬಲೀಅ್ ಗೋತ್ರದ ಒಂದು ಶಾಖೆ ಬನೂ ಅನೀಬ್‌ಗೆ ಸೇರಿದ್ದರು. ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಅವರು ಹಿಜರಿ 12ರಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಸದಖ ನೀಡಬೇಕೆಂಬ ಆಜ್ಞೆ ನೀಡಿದಾಗ ರಾತ್ರಿ ಮಜೂರಿಗೆ ಕೂಲಿ ಕೆಲಸ ಮಾಡಿ ಸಂಪಾದಿಸಿದುದನ್ನು ಸದಖವಾಗಿ ನೀಡಿದ ಸಹಾಬರಲ್ಲಿ ಅವರು ಸೇರಿದ್ದರು. ಬುಖಾರಿಯ ಹದೀಸು ಗ್ರಂಥದಲ್ಲಿ ಹಝ್ರತ್ ಅಬೂ ಮಸ್‌ಊದ್ ವರದಿ ಮಾಡುತ್ತಾರೆ: ಸದಖ ನೀಡಬೇಕೆಂಬ ಆಜ್ಞೆ ದೊರೆತಾಗ ನಾವು ಮಜೂರಿಗೆ ಭಾರ ಹೊತ್ತು ಸಾಗಿಸುತ್ತಿದ್ದೆವು.

ಅಲ್ಲಾಮ ಇಬ್ನು ಹಜರ್ ಅಸ್‌ಖಲಾನಿ ಹೇಳುತ್ತಾರೆ: ಹಝ್ರತ್ ಅಬೂ ಅಖೀಲ್‌ರನ್ನು 'ಸಾಹಿಬಸ್ಸಾಅ' ಎಂದು ಸಹ ಕರೆಯುತ್ತಿದ್ದರು. ಅದಕ್ಕೆ ಸಬಂಧಿಸಿದ ಘಟನೆ ಹೀಗಿದೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ತನ್ನ ಸಂಪತ್ತಿನ ಅರ್ಧ ಭಾಗವನ್ನು ಸದಖವಾಗಿ ನೀಡಲು ತಂದಾಗ ಅನ್‌ಸಾರ್‌ಗಳ ಪೈಕಿ ಒಬ್ಬ ಬಡ ಮುಸ್ಲಿಮ್ ಅಬೂ ಅಖೀಲ್ ಮುಂದೆ ಬಂದು ಹೇಳಿದರು: ಅಲ್ಲಾಹನ ಸಂದೇಶವಾಹಕರೇ ನಾನು ರಾತ್ರಿ ಇಡೀ ಬಾವಿಯಿಂದ ನೀರು ಸೇದಿ ಎರಡು ಸಾಅ್ ಖರ್ಜೂರ ಸಂಪಾದಿಸಿದೆ. ಒಂದು ಸಾಅ್ ಖರ್ಜೂರ ಮನೆಯವರಿಗೆ ಇರಿಸಿದೆ. ಎರಡನೆಯ ಸಾಅ್ ಸದಖವಾಗಿ ನೀಡಲು ತಂದಿದ್ದೇನೆ. ಕಪಟವಿಶ್ವಾಸಿಗಳು ಹೇಳಿದರು: ಅಲ್ಲಾಹನು ಮತ್ತು ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಅಖೀಲನ ಒಂದು ಸಾಅ್ ಖರ್ಜೂರದಿಂದ ಶ್ರೀಮಂತರಾಗಿದ್ದಾರೆ ಎಂದು ಪರಿಹಾಸ ಮಾಡಿದಾಗ ಅಲ್ಲಾಹನು ಹೀಗೆ ಹೇಳಿದನು: ٱلَّذِينَ يَلۡمِزُونَ ٱلۡمُطَّوِّعِينَ مِنَ ٱلۡمُؤۡمِنِينَ فِي ٱلصَّدَقَٰتِ وَٱلَّذِينَ لَا يَجِدُونَ إِلَّا جُهۡدَهُمۡ **ಅಲ್ಲಝೀನ ಯಲ್ ಮಿಝೂನಲ್ ಮುತವ್ವಿಈನ ಮಿನಲ್ ಮೂಮಿನೀನ ಫೀಸ್ಸದಖಾತಿ ವಲ್ಲಝೀನ ಲಾ ಯಜಿದೂನ ಇಲ್ಲಾ ಜುಹ್‌ದಹುಂ.** – ಸತ್ಯ ವಿಶ್ವಾಸಿಗಳ ಪೈಕಿ ಸ್ವಂತ ಇಷ್ಟದಿಂದ ದಾನಧರ್ಮ ಮಾಡುವವರನ್ನು ಮತ್ತು ತಮ್ಮ ಕಠಿಣ ಶ್ರಮ ಹೊರತು ಬೇರೇನನ್ನೂ ದಾನ ಮಾಡಲು ಅಶಕ್ತರಾದವರನ್ನು ಆಕ್ಷೇಪಿಸುವವರು ಅವರಾಗಿದ್ದಾರೆ. (9:79). ಮುಸೈಲಿಮ ಕಝ್ಝಾಬನ ಮೇಲೆ ಕೊನೆಯ ಪ್ರಹಾರ ಮಾಡಿದವರು ಹಝ್ರತ್ ಅಬೂ ಅಖೀಲ್ ಆಗಿದ್ದರು.

ಇಬ್ನು ಸಅದ್ ಹೇಳುತ್ತಾರೆ: ಯಮಾಮ ಯುದ್ಧದ ದಿನ ಮುಸ್ಲಿಮರಲ್ಲಿ ಅಬೂ ಅಖೀಲ್ ಎಲ್ಲರಿಗಿಂತ ಮೊದಲು ಗಾಯಗೊಂಡರು. ಭುಜ ಮತ್ತು ಹೃದಯದ ಮಧ್ಯೆ ಬಾಣ ನಾಟಿತ್ತು. ಆದರೆ ಅವರು ಆಗ ಶಹೀದರಾಗಲಿಲ್ಲ. ಅವರನ್ನು ಅಲ್ಲಿಂದ ಅವರ ಡೇರೆಗೆ ತರಲಾಯಿತು. ಯುದ್ಧವು ತೀವ್ರಗತಿಯನ್ನು ತಲಪಿದಾಗ ಹಝ್ರತ್ ಮುಯಿನ್ ಬಿನ್ ಅದಿ ಅನ್‌ಸಾರ್‌ಗಳನ್ನು ಉಚ್ಚ ಧ್ವನಿಯಿಂದ ಉತ್ತೇಜಿಸುವ ಶಬ್ದವನ್ನು ಆಲಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ: ಆಗ ಹಝ್ರತ್ ಅಬೂ ಅಖೀಲ್ ಅನ್‌ಸಾರುಗಳ ಜೊತೆ ಸೇರಲು ಎದ್ದು ನಿಂತರು. ನಾನು ಹೇಳಿದೆ: ಓ ಅಬೂ ಅಖೀಲ್ ನೀವೇನು ಇಚ್ಛಿಸುತ್ತೀರಿ. ಹೋರಾಡಲು ನಿಮಗೆ ಶಕ್ತಿ ಇಲ್ಲ. ಅಬೂ ಅಖೀಲ್ ಹೇಳಿದರು: ಕರೆ ನೀಡುವವರು ನನ್ನ ಹೆಸರನ್ನೂ ಹೇಳಿದ್ದಾರೆ. ನಾನು ಹೇಳಿದೆ: ಅವರು ಯುದ್ಧ ಮಾಡಲು ಶಕ್ತರಾದ ಅನ್‌ಸಾರ್‌ಗಳನ್ನು ಕರೆಯುತ್ತಿದ್ದಾರೆ. ಗಾಯಗೊಂಡವರನ್ನಲ್ಲ. ಹಝ್ರತ್ ಅಬೂ ಅಖೀಲ್ ಹೇಳಿದರು: ಅವರು ಅನ್‌ಸಾರ್‌ಗಳನ್ನು ಕರೆಯುತ್ತಿದ್ದಾರೆ. ನಾನು ಗಾಯಗೊಂಡಿದ್ದರೂ ನಾನು ಅನ್‌ಸಾರ್‌ಗಳಿಗೆ ಸೇರಿದ್ದೇನೆ.

ಆದುದರಿಂದ ನಾನು ಕರೆಗೆ ಓಗೊಟ್ಟು ಹೋಗುವೆನು. ಮೊಣಕಾಲೂರಿ ಹೋಗಬೇಕಾಗಿದ್ದರೂ ಹೋಗುವೆನು.

ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ಹಝ್ರತ್ ಅಬೂ ಅಖೀಲ್ ಎದ್ದು ನಿಂತು ಬಲಗೈಯಲ್ಲಿ ಖಡ್ಗ ಹಿಡಿದು ಹೇಳಿದರು: ಓ ಅನ್‌ಸಾರ್‌ಗಳೇ, ಹುನೈನ್ ಯುದ್ಧದಲ್ಲಿ ಮಾಡಿದ ಹಾಗೆ ಶತ್ರುಗಳ ವಿರುದ್ಧ ಪುನಃ ಆಕ್ರಮಣ ಮಾಡಿರಿ. ಅನ್‌ಸಾರ್‌ಗಳು ಒಗ್ಗೂಡಿ ಶತ್ರುಗಳ ಕಡೆಗೆ ಸಾಗಿದರು. ಶತ್ರುಗಳು ಓಡಿ ಹೋಗಿ ತೋಟಗಳಿಗೆ ನುಗ್ಗಲು ನಿರ್ಬಂಧಿತರಾದರು. ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ನಾನು ಹಝ್ರತ್ ಅಬೂ ಅಖೀಲ್‌ರನ್ನು ನೋಡಿದಾಗ ಅವರ ಗಾಯಗೊಂಡ ಕೈ ಭುಜದಿಂದ ಕೆಳಗೆ ಬಿದ್ದಿತ್ತು. ಅವರ ಶರೀರದಲ್ಲಿ ಹದಿನಾಲ್ಕು ಗಾಯಗಳಿದ್ದುವು. ಪ್ರತಿಯೊಂದು ಗಾಯ ಮಾರಣಾಂತಿಕವಾಗಿತ್ತು. ಮುಸೈಲಿಮ ಕೊಲ್ಲಲ್ಪಟ್ಟು ಅವನ ದೇಹ ಸಹ ಅಲ್ಲಿಯೇ ಬಿದ್ದಿತ್ತು. ಹಝ್ರತ್ ಅಬೂ ಅಖೀಲ್ ಗಾಯಗೊಂಡು ಭೂಮಿಯ ಮೇಲೆ ಬಿದ್ದಿದ್ದರು. ಅವರು ಕೊನೆಯುಸಿರು ಬಿಡುತ್ತಿದ್ದರು. ನಾನು ಬಾಗಿ ಹೇಳಿದೆ, ಓ ಅಬೂ ಅಖೀಲ್, ಅವರು ಹೇಳಿದರು: ಲಬ್ಬೈಕ್ ನಾನು ಹಾಜರಿದ್ದೇನೆ. ಅವರು ಅಸ್ಪಷ್ಟವಾಗಿ ಕೇಳಿದರು: ಜಯ ಯಾರಿಗೆ ಲಭಿಸಿತು. ನಾನು ಹೇಳಿದೆ: ತಮಗೆ ಶುಭವಾರ್ತೆ ಇದೆ. ಮುಸ್ಲಿಮರು ಜಯಶಾಲಿಗಳಾದರು. ನಾನು ಉಚ್ಛ ಸ್ವರದಲ್ಲಿ ಹೇಳಿದೆ: ಅಲ್ಲಾಹನ ಶತ್ರು ಮುಸೈಲಿಮ ಕಝ್ಝಾಬ್ ವಧಿಸಲ್ಪಟ್ಟಿರುವನು. ಆಗ ಹಝ್ರತ್ ಅಬೂ ಅಖೀಲ್ ಅಲ್ಲಾಹನನ್ನು ಸ್ತುತಿಸುತ್ತಾ ಆಕಾಶದ ಕಡೆಗೆ ಬೆರಳೆತ್ತಿದರು ಮತ್ತು ಮೃತರಾದರು. ಅಲ್ಲಾಹನು ಅವರ ಮೇಲೆ ದಯೆದೋರಲಿ. ಅಲ್ಲಾಹನು ಎಲ್ಲ ಸಹಾಬರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

ಜುಮುಅ ನಮಾಝ್‌ನ ನಂತರ ಇಬ್ಬರ ಜನಾಝ ಗಾಯಿಬ್ ನಮಾಝ್ ನಿರ್ವಹಿಸುವೆನು. ಪ್ರಥಮ ಜನಾಝ ಮುಹ್ತರಮ್ ಅಬ್ದುಲ್ ಅಝೀಝ್ ಸಾದಿಖ್ ಸಾಹಿಬರದ್ದು. ಅವರು ಬಂಗ್ಲಾದೇಶದಲ್ಲಿ ಮುರಬ್ಬಿಯಾಗಿದ್ದರು. 2018 ಜುಲಾಯಿ 26ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ನಾಲ್ಕನೆಯ ಕ್ಲಾಸಿನಲ್ಲಿ ಕಲಿಯುತ್ತಾ ಇದ್ದಾಗ ಹೆಚ್ಚಿನ ವಿದ್ಯಾಭ್ಯಾಸಕ್ಕೋಸ್ಕರ ಖಾದಿಯಾನಿಗೆ ಹೋದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರಿಂದ ತರಬೇತಿ ಗಳಿಸುವ ಸಂದರ್ಭ ಲಭಿಸಿತು. ಭಾರತದ ವಿಭಜನೆಯ ನಂತರ ವಿದೇಶೀ ವಿದ್ಯಾರ್ಥಿಗಳು ತಮ್ಮ ತಮ್ಮ ದೇಶಗಳಿಗೆ ಮರಳಿದಾಗ ಅವರು ಪೂರ್ವ ಬಂಗಾಳಕ್ಕೆ ಮರಳಿದರು. ಅವರು ರಬ್ವದ ಜಾಮಿಅ ಅಹ್ಮದಿಯಾದಿಂದ ಶಾಹಿದ್ ಬಿರುದು ಪಡೆದರು. ನಂತರ ಮೌಲವಿ ಫಾಸ಼ಿಲ್ ಬಿರುದನ್ನು ಸಹ ಗಳಿಸಿದರು. ಅವರು ವಿವಿಧ ಸ್ಥಳಗಳಲ್ಲಿ ಮುರಬ್ಬಿ ಮತ್ತು ಮುಬಲ್ಲಿಗರಾಗಿ ಕಾರ್ಯ ನಿರ್ವಹಿಸಿದರು. ಬಂಗಾಳಿ ಭಾಷೆಯಲ್ಲಿ ಪವಿತ್ರ ಖುರ್‌ಆನ್ ಭಾಷಾಂತರಿಸುವ ಸಮಿತಿಯಲ್ಲಿ ಅವರು ಸೇರಿದ್ದರು. ಅವರಿಗೆ ಅಸೀರಾನೆ ರಾಹೆ ಮೌಲಾಗಳಲ್ಲಿ ಸೇರುವ ಭಾಗ್ಯ ಸಹ ಲಭಿಸಿತ್ತು. ಅವರು ಪತ್ನಿ, ಮೂವರು ಪುತ್ರಿಯರು, ಇಬ್ಬರು ಪುತ್ರರು ಮತ್ತು ಅನೇಕ ಮೊಮ್ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರ ಪದವಿ ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಗೊಳಿಸುವವರಾಗಲಿ.

ಇನ್ನೊಂದು ಜನಾಝ ಮುಹಮ್ಮದ್ ಝಫರುಲ್ಲಾ ಸಾಹಿಬ್ ಶಹೀದ್ ಬಿನ್ ಮುಕರ್ರಮ್ ಬಶಾರತ್ ಅಹ್ಮದ್ ಸಾಹಿಬ್, ಸಯ್ಯಿದ್‌ವಾಲಾ ನನ್‌ಕಾನ ಅವರದಾಗಿದೆ. ಅಗಸ್ಟ್ 29ರಂದು ಮಗ್‌ರಿಬ್ ಸಮಯದಲ್ಲಿ ಅವರ ಅಂಗಡಿಗೆ ಡಕಾಯಿತರು ಆಕ್ರಮಣ ನಡೆಸಿ ಅವರಿಗೆ ಗುಂಡು ಹಾರಿಸಿ ಹತ್ಯೆ ಮಾಡಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

ಅಲ್ಲಾಹನು ಮೃತರ ಪದವಿಯನ್ನು ಉನ್ನತಗೊಳಿಸಲಿ. ಅವರ ಎಲ್ಲಾ ಸಂಬಂಧಿಕರಿಗೆ ಸಹನೆಯನ್ನೂ ಧೈರ್ಯವನ್ನೂ ನೀಡಲಿ. ಮತ್ತು ಅವರ ಸಂಬಂಧಿಕರು ಅವರ ಒಳಿತುಗಳನ್ನು ಜಾರಿಗೊಳಿಸುತ್ತಾ ಇರುವವರಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 31-08-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon